## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.

**ಸಿ.ಸಿ. ನಂ. 834/2023.**

ಪಿರ್ಯಾದುದಾರರುಃ– ಹೊನ್ನಾವರ ಪೊಲೀಸ್ ಠಾಣೆ ,
ಹೊನ್ನಾವರ,
ತಾಲೂಕುಃ– ಹೊನ್ನಾವರ (ಉ.ಕ.).

**– ವಿರುದ್ಧ –**

ಆರೋಪಿತರುಃ– 1. ರಾಜೇಶ ತಂದೆ ಈಶ್ವರ ತಾಂಡೇಲ ,
ಪ್ರಾಯ ಸುಮಾರುಃ– 36 ವರ್ಷ,
ವೃತ್ತಿಃ– ಮೀನುಗಾರಿಕೆ ,
ಸಾಕೀನಃ– ಟೊಂಕ , ಕಾಸರಕೋಡ,
ತಾಲೂಕುಃ– ಹೊನ್ನಾವರ (ಉ.ಕ .).

3. ರಾಜೇಶ ತಂದೆ ಗೋವಿಂದ ತಾಂಡೇಲ ,
ಪ್ರಾಯ ಸುಮಾರುಃ– 40 ವರ್ಷ,
ವೃತ್ತಿಃ– ಮೀನುಗಾರಿಕೆ ,
ಸಾಕೀನಃ– ಟೊಂಕ , ಕಾಸರಕೋಡ,
ತಾಲೂಕುಃ– ಹೊನ್ನಾವರ (ಉ.ಕ.).

*****

### ದೋಷಾರೋಪಣೆ.

ಶ್ರೀ ಈರಣ್ಣ ಹುಣಶಿಕಟ್ಟಿ, ಬಿ.ಕಾಂ. ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ದಿನಾಂಕ 20–05–2022 ರಂದು ಬೆಳಿಗ್ಗೆ 9.30 ಗಂಟೆಯ ಸುಮಾರಿಗೆ ಹೊನ್ನಾವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಹೊನ್ನಾವರ ತಾಲೂಕಿನ ಟೊಂಕ ಕಾಸರಕೋಡದಲ್ಲಿರುವ ಕಾಸಿಂ ಮನೆ ಕ್ರಾಸ್ ಹತ್ತಿರ ಪಿರ್ಯಾದಿಯವರು, ಕಾರ್ ನಂ.ಕೆಎ–19/ಎ.ಬಿ–3347 ರ ವಾಹನದಲ್ಲಿ ಹೋಗುತ್ತಿದ್ದಾಗ, 1 ಮತ್ತು 3ನೇ ಆರೋಪಿತರಾದ ನೀವಿಬ್ಬರೂ 2 ನೇ ಆರೋಪಿಯೊಂದಿಗೆ ಸೇರಿಕೊಂಡು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಪಿರ್ಯಾದಿಯವರನ್ನು ಅಡ್ಡಗಟ್ಟಿ ತಡೆದಿದ್ದು, ಈ ಮೂಲಕ 1 ಮತ್ತು 3ನೇ ಆರೋಪಿತರಾದ ನೀವಿಬ್ಬರೂ **ಭಾರತೀಯ ದಂಡ ಸಂಹಿತೆ ಕಲಂ. 341 ಸಹವಾಚಕ ಕಲಂ. 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ , ಸಮಯ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವಿಬ್ಬರೂ ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಪಿರ್ಯಾದಿಯವರನ್ನು ಉದ್ದೇಶಿಸಿ, ಬೋಸುಡಿ ಮಕ್ಕಳಾ, ಸೂಳಾ ಮಕ್ಕಳಾ ನಿಮಗೆ ಒಂದು ಸಾರಿ ಹೇಳಿದರೆ ತಿಳಿಯುವುದಿಲ್ಲವೇ, ಇಲ್ಲಿಯ ಕಾಮಗಾರಿಯನ್ನು ನಿಲ್ಲಿಸಿ, ಈ ಲೋಡ್ ಗಳನ್ನು ತೆಗೆದುಕೊಂಡು ಹೊರಟು ಹೋಗಿ ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದು, ಈ ಮೂಲಕ 1 ಮತ್ತು 3ನೇ ಆರೋಪಿತರಾದ ನೀವಿಬ್ಬರೂ **ಭಾರತೀಯ ದಂಡ ಸಂಹಿತೆ ಕಲಂ. 504 ಸಹವಾಚಕ ಕಲಂ. 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ , ಸಮಯ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವಿಬ್ಬರೂ ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಪಿರ್ಯಾದಿಯವರನ್ನು ಜಗಳದಿಂದ ಬಿಡಿಸಲು ಬಂದ ಇತರ ಸಾಕ್ಷಿದಾರರನ್ನು ಕಂಡು, ಆರೋಪಿತರಾದ ನೀವಿಬ್ಬರೂ, ಈ ದಿನ ಜೊತೆಗಿದ್ದಾರೆಂದು ತಪ್ಪಿಸಿಕೊಂಡೆ, ಇನ್ನೊಂದು ದಿನ ಒಬ್ಬನೇ ಸಿಗು ನಿನ್ನನ್ನು ಕೊಂದು ಸಮುದ್ರಕ್ಕೆ ಎಸೆಯುತ್ತೇವೆ ಎಂದು ಜೀವ ಬೆದರಿಕೆ ಹಾಕಿದ್ದು, ಈ ಮೂಲಕ 1 ಮತ್ತು 3ನೇ ಆರೋಪಿತರಾದ ನೀವಿಬ್ಬರೂ **ಭಾರತೀಯ ದಂಡ ಸಂಹಿತೆ ಕಲಂ.506 ಕಲಂ. 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1 : ಈಗ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೆ?

1 ಮತ್ತು 3 ನೇ ಆರೋಪಿತರ ಉತ್ತರ : ತಿಳಿಯಿತು.

ಪ್ರಶ್ನೆ2 : ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

1 ಮತ್ತು 3 ನೇ ಆರೋಪಿತರ ಉತ್ತರ : ವಿಚಾರಣೆಯಾಗಬೇಕು.

(ಈ ಮೂಲಕ ಪ್ರಮಾಣಿಸುವುದೇನೆಂದರೆ 1 ಮತ್ತು 3ನೇ ಆರೋಪಿತರು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ.)

**ಸಹಿ ಇದೆ.**

**ದಿನಾಂಕಃ- 18-06-2026.**

**(ಈರಣ್ಣ ಹುಣಶಿಕಟ್ಟಿ).,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ.,ಹೊನ್ನಾವರ.**

1ನೇ ಆರೋಪಿಯ ಸಹಿಃ- **ಸಹಿ ಇದೆ.**

3ನೇ ಆರೋಪಿಯ ಸಹಿಃ- **ಸಹಿ ಇದೆ.**

******